# 32 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

## ಸಿಸಿ ನಂಃ 31209/2022

**CW.**12 : **PW.**8

| | | |
|---|---|---|
| **ಸಾಕ್ಷಿದಾರರ ಹೆಸರು** | : | ಗೌತಮ್ ರಾಥೋಡ್ |
| **ತಂದೆಯ ಹೆಸರು** | : | ತುಕಾರಾಮ್ ರಾಥೋಡ್ |
| **ವಯಸ್ಸು** | : | 36 ವರ್ಷ |
| **ಉದ್ಯೋಗ** | : | ಪಿ.ಎಸ್.ಐ |
| **ವಾಸಸ್ಥಳ** | : | ಚಾಮರಾಜ ಪೇಟೆ , ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕ 29.02.2024 ರಂದು ಕರೆಸಿ ಪ್ರತಿಜ್ಞಾ ವಿಧಿ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನಾನು ದಿಃ 09.02.2022 ರಿಂದ ಇಲ್ಲಿಯವರೆಗೆ ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 28.07.2022 ರಂದು ನಾನು ಚಾಸಾ.11 ಅವರಿಂದ ಸಂಪೂರ್ಣ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ.

2. ದಿನಾಂಕ 28.07.2022 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ.2 ಮತ್ತು 3 ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಬೆಳಿಗ್ಗೆ 10.00 ರಿಂದ 10-45 ಗಂಟೆಯವರೆಗೆ ಸ್ಥಳ ಪಂಚನಾಮೆ ಜರುಗಿಸಿದ್ದು ಅದನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ.2(ಸಿ)** ಎಂದು ಗುರುತಿಸಲಾಯಿತು. ಅದೇ ದಿನ ಪೊಲೀಸ್ ಠಾಣೆಯಲ್ಲಿ ಪಂಚರಾದ ಚಾಸಾ.2 ಮತ್ತು 3 ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಬೆಳಿಗ್ಗೆ 10.00 ರಿಂದ 10-45 ಗಂಟೆಯವರೆಗೆ ಅಮಾನತ್ತು ಪಂಚನಾಮೆ ಜರುಗಿಸಿ ಕಪ್ಪು ಬಣ್ಣದ ಪಲ್ಸರ್ KA 02-KM-6952 ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ,

ಅಮಾನತ್ತು ಪಂಚನಾಮೆಯನ್ನು ಈಗಾಗಲೇ ನಿಪಿ.9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ.9(ಬಿ)** ಎಂದು ಗುರುತಿಸಲಾಯಿತು. ದಿಃ 29.07.2022 ರಂದು ಚಾಸಾ - 6, 7 ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ30.07.2022 ರಂದು ಚಾಸಾ-9 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 08.08.2022 ರಂದು ಚಾಸಾ-8 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಸಂಪೂರ್ಣ ಕಡತವನ್ನು ಚಾಸಾ.13 ಅವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲು :- ಶ್ರೀ.ವಿ.ಎನ್.ಎಸ್. ಆರೋಪಿ ಪರ ವಕೀಲರಿಂದಃ-**

3. ದಿಃ 27.07.2022 ರಂದು ಘಟನೆ ನಡೆದಿರುತ್ತದೆ. ದಿಃ 28.07.2022 ರಂದು ಸ್ಥಳ ಪಂಚನಾಮೆ ಜರುಗಿಸಿರುತ್ತೇನೆ. ಘಟನಾ ಸ್ಥಳ ದಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿರುತ್ತದೆ ಎಂದರೆ ಸರಿ. ನನ್ನ ತನಿಖಾ ಅವಧಿಯಲ್ಲಿ ಸಿಸಿಟಿವಿ ಫೋಟೇಜಸ್ ಅನ್ನು ಪರಿಶೀಲನೆ ಮಾಡಿರುವುದಿಲ್ಲ. ಘಟನೆ ರಾತ್ರಿ 9-30 ರ ಸಮಯದಲ್ಲಿ ನಡೆದಿರುತ್ತದೆ. ರಾತ್ರಿ 10-20 ರ ಸಮಯಕ್ಕೆ ಚಾಸಾ-1 ರವರು ಮತ್ತು ಆರೋಪಿತನು ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿರುತ್ತಾರೆ. ಸಂಬಂಧ ಪಟ್ಟ ವೈದ್ಯರಿಂದ ನಾನು ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರಿಕೆಯಲ್ಲಿ ರಾತ್ರಿ 10-20 ರ ಸಮಯದಲ್ಲಿ ಇಬ್ಬರಿಗೂ ಚಿಕಿತ್ಸೆ ನೀಡಿದ ಬಗ್ಗೆ ನಮೂದು ಆಗಿರುತ್ತದೆ. ಪಂಚರಿಗೆ ನಾನು ಲಿಖಿತ ನೋಟಿಸ್ ಅನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪಂಚರಿಗೆ ನಾನು ಸ್ಥಳದಲ್ಲಿ ನೋಟೀಸು ನೀಡಿರುತ್ತೇನೆ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನಿಮ್ಮ ಪೊಲೀಸ್ ಸಿಬ್ಬಂದಿಯಾದ ಕಾರಣ ಅವರಿಗೆ ಅನುಕೂಲವಾಗುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು)

**ಓ ಹೇ ಕೆ ಸ ಇ**

**(ಲತಾ.ಜೆ),**

**32 ನೇ ಎ.ಸಿ.ಎಂ.ಎಂ. ಬೆಂಗಳೂರು.**